ಓಎಸ್ ನಂ.20-2022

ಡಿ.ಡಬ್ಲ್ಯೂ-1

ದಿನಾಂಕಃ 11-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿ</u>ವಾದಿ ಪರ ಶ್ರೀ ಎಮ್ ಪಿ . ಬಿ ವಕೀಲರಿಂದಃ**

1. ನಾನು ಹುಟ್ಟಿದ 6 ತಿಂಗಳಿಗೆ ನನ್ನ ತಂದೆಯು ತೀರಿಕೊಂಡಿರುತ್ತಾರೆ. ನಿಮ್ಮ ಪ್ರಕಾರ ನಿಮ್ಮ ತಂದೆಯು ಅವರ ಜೀವಿತಾವಧಿ ಕಾಲದಲ್ಲಿ ಅವರ ತಂದೆಯಿಂದ ಆಸ್ತಿಯಲ್ಲಿ ಪಾಲನ್ನು ತೆಗೆದುಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಇಲ್ಲ. ಅವರು ಯಾವಾಗ ಅವರ ತಂದೆಯಿಂದ ಪ್ರತ್ಯೇಕವಾಗಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ . ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ . ಸದ್ರಿ ದಾವಾಸ್ತಿಗಳು ನನ್ನ ಮತ್ತು ನನ್ನ ಅಕ್ಕಳಾದ ವಾದಿಯ ಹೆಸರಿಗೆ ಇರುತ್ತದೆ . ಸದ್ರಿ ನಿಮ್ಮ ಮತ್ತು ವಾದಿಯ ಹೆಸರಿನಲಿಲರುವ ಆಸ್ತಿಯಲ್ಲಿ ನಿಮ್ಮ ಅಜ್ಜನ ಉಳಿದ ಮಕ್ಕಳಿಗೆ ಪಾಲು ಇರುತ್ತದೆಯಾ ಎಂದರೆ ತೊಂಡಿಯಲ್ಲಿ ಆಸ್ತಿಗಳು ಪಾಲು ಆಗಿರುತ್ತದೆ . ಸದ್ರಿ ತೊಂಡಿ ಪಾಲು ವಿಭಾಗವು ನನ್ನ ಅಜ್ಜ ಮತ್ತು ನನ್ನ ತಾಯಿ ಮಾಡಿಕೊಂಡಿರುತ್ತಾರೆ. ತಂದೆಯ ತರುವಾಯ ಯಾವಾ ಯಾವ ಅಸ್ತಿಗಳು ನಿಮ್ಮ ಮತ್ತು ವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಆಗ ತಾಯಿಯವರು ಸಾಗುವಳಿ ಮಾಡುತ್ತಿದ್ದರು ಅದರ ಬಗ್ಗೆ ನನಗೆಮಾಹಿತಿ ಇಲ್ಲ . ತಾಯಿ ಹೇಳಿದ್ದನ್ನು ಕೇಳಿಕೊಂಡು ಅದಷ್ಟನ್ನೆ ನಾನು ಹೇಳುತ್ತಿದ್ದೇನೆ . ನೀವು ನಿಮ್ಮ ಅಕ್ಕ ವಾದಿ ಹಾಗೂ ನಿಮ್ಮ ತಾಯಿ ಮೂರು ಜನ ಸೇರಿ ಕೊಂಡು ನೋಂದಾಯಿತ ಪಾಲು ವಿಭಾಗವನ್ನು ಈ ವರೆಗೆ ಮಾಡಿಕೊಂಡಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . ನನ್ನ ತಾಯಿಯು ನನ್ನ ರಕ್ಷಕನಾಗಿ ನನ್ನ ತಿಳುವಳಿಕೆ ಬರುವ ತನಕ ಆಗಿದ್ದರು. ನನ್ನ ತಿಳುವಳಿಕೆ ಬಂದ ನಂತರ ನಮ್ಮ ಕುಟುಂಬದ ಯಜಮಾನಿಕೆ ಯನ್ನು ನನ್ನ ತಾಯಿ ಮಾಡುತ್ತಾಳೆ . ಈಗ 3-4 ವರ್ಷಗಳಿಂದ ದಾವಾ ಅಸ್ತಿಯಲಿಲ ತೆಂಗು , ಅಡಿಕೆ ,ಬಾಳೆ ಬೆಳೆದ ಬೆಳೆಗಳನ್ನು ನಾನು ವಕಾರಿಗೆ ಕೊಡೆತ್ತೇನೆ . ಸದ್ರಿ ವಕಾರಿಯಿಂದ ಬಂದ ಆದಾಯವನ್ನು ಪುನಃ ಬೆಳೆಯನ್ನು ಬೆಳೆಸಲು ಹೂಡಿಕೆಯನ್ನು ನೀವು ಮಾಡುತ್ತೀರಿ ಎಂದರೆ ಸರಿ . ಅಡಿಕೆ , ತೆಂಗು , ಬಾಳೆ ಮಾರಾಟ ಮಾಡಿ ಎಷ್ಟು ಹಣ ಬಂದಿತು ಎಷ್ಟು ಹಣ

ಖರ್ಚಾಯಿತು ಎಂದು ಲೆಕ್ಕಾಚಾರ ವನ್ನು ಬರೆದಿಟ್ಟುಕೊಂಡಿರುತ್ತೀರಿ ಎಂದರೆ ಹೌದು . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇತೊಂದರೆ ಇಲ್ಲ. ಇವತ್ತಿನವರೆಗೂ ಆ ಲೆಕ್ಕ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ . ಇವತ್ತಿನವರೆಗೂ ನಿಮಗೆ ವೈಯಕ್ತಿಕವಾಗಿ ಬಂದ ಆದಾಯ ಎಷ್ಟುಮತ್ತು ಪಿತ್ರಾರ್ಜಿತ ವಾಗಿ ಬಂದ ಆದಾಯ ಎಷ್ಟು ಎಂದು ಲೆಕ್ಕ ಇಟ್ಟಿರುತ್ತೀರಾ ಎಂದರೆ ಹೌದು . ಸದ್ರಿ ವೈಯಕ್ತಿಕ ಆದಾಯದ ಲೆಕ್ಕಪತ್ರಗಳನ್ನು ನ್ಯಾಯಾಲಯದ ಮುಂದೆ ತಂದು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ . ಇವತ್ತಿನವರೆಗೂ ಅಂತಹ ಲೆಕ್ಕಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ .

2. ವೈಯಕ್ತಿಕವಾಗಿ ವ್ಯವಹಾರಕ್ಕಾಗಿ ನಾನು ಬ್ಯಾಂಕ ಖಾತೆ ಹೊಂದಿರುತ್ತೇನೆ . ಒಟ್ಟು ಕುಟುಂಬದಿಂದ ಬಂದ ಆದಾಯದ ವ್ಯವಹಾರಕ್ಕಾಗಿ ಪ್ರತ್ಯೇಕವಾದ ಬ್ಯಾಂಕ ಖಾತೆಯನ್ನು ನಾನು ಹೊಂದಿರುವುದಿಲ್ಲ . ನಾನು ಒಬ್ಬನೇ ಗಂಡು ಮಗನಿರುವುದರಿಂ ಪ್ರತ್ಯೇಕವಾಗಿ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯಕ್ಕೆ ಪ್ರತ್ಯೇಕ ಬ್ಯಾಂಕ ಖಾತೆ ಮತ್ತು ನನ್ನ ವೈಯಕ್ತಿಕ ವ್ಯವಹಾರಕ್ಕೆ ಪ್ರತೇಕ ಬ್ಯಾಂಕ ಖಾತೆ ಹೊಂದಿರುವುದಿಲ್ಲ . ಒಂದೇ ಖಾತೆ ಯನ್ನು ಹೊಂದಿರುತ್ತೇನೆ . ನಾನು ವೈಯಕ್ತಿಕವಾಗಿ ಸಾಲ ಮಾಡಿಲ್ಲ . ಕುಟುಂಬಕ್ಕಾಗಿ ಸಾಲ ಮಾಡಿರುತ್ತೇನೆ . ಆ ಕುಟುಂಬದ ಸಾಲವನ್ನು ತೀರಿಸುವ ರುಣಿಯ ನಾನೆ ಆಗಿರುತ್ತೇನೆ .

3. ನನಗೆ ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ . ನನಗೆ ರೇಷನ್ ಕಾರ್ಡ ಇರುತ್ತದೆ . ನನ್ನ ಮೊದಲ ಮಗಳಿಗೆ 13 ವರ್ಷ ಇನ್ನೊಂದು ಮಗಳಿಗೆ 4 ವರ್ಷ ಇರುತ್ತದೆ . ನನ್ನ ಹೆಂಡತಿಯ ಹೆಸರಿನಲ್ಲಿ ರೇಷನ್ ಕಾರ್ಡ ಮಾಡಿಸಿ ಮೂರುವರೆಯಿಂದ ನಾಲ್ಕು ವರ್ಷವಾಗಿರುತ್ತದೆ . ನನ್ನ ಹೆಂಡತಿಯ ಹೆಸರಿನಲ್ಲಿ ಪ್ರತ್ಯೇಕ ರೇಷ್ನ್ ಮಾಡಿಸುವ ಪೂರ್ವದಲ್ಲಿ ನನ್ನ ತಾಯಿ ಮತ್ತು ನನ್ನ ಹೆಸರಿನಲ್ಲಿ ರೇಷನ ಕಾರ್ಡ ಇತ್ತು . ನನ್ನ ತಾಯಿಯ ರೇಷನ್ ಕಾರ್ಡ ಕೊಡ್ಲಗದ್ದೆ ಗ್ರಾಮಕ್ಕೆ ಸಬಂಧಿಸಿದಂತೆ ಇತ್ತು . ನಮ್ಮ ಮನೆಯ ನಂಬರ 251 ಆಗಿರುತ್ತದೆ . ಹೊಸದಾಗಿ ಮನೆಯ ನಂಬರ ಎಷ್ಟು ಎಂದರೆ ಅದು ಫಾರ್ಮ ಹೌಸ ಪರ್ಮಿಷನವಾಗಿರತ್ತದೆ ಅದಕ್ಕೆ ಪ್ರತ್ಯೇಕ ನಂಬರ ಇರುವುದಿಲ್ಲ . ಮನೆಯ ನಂಬರ 251 ಅದು ಹಳೆಯ ನಂಬರವಾಗಿದ್ದು ಅದು ನನ್ನ ತಾಯಿಯ ಹೆಸರಿನಲ್ಲಿರುತ್ತದೆ . ಫಾರ್ಮ ಹೌಸ ಗ್ರಹಪ್ರವೇಶವಾಗಿಲ್ಲ . ಹಾಗೆ ವಾಸ ಮಾಡುತ್ತಿದ್ದೇವೆ . ಫಾರ್ಮ ಹೌಸ

ಕಂಪ್ಲಿಟ್ ಮಾಡಿ ಎಷ್ಟು ತಿಂಗಳು ಆಯಿತು ಎಂದರೆ ಅದು ಪೂರ್ತಿಯಾಗಿ ಕಂಪ್ಲಿಟ್ ಆಗಿಲ್ಲ. ಇನ್ನೂ ಕೆಲಸ ನಡೆಯುತ್ತಿದೆ . ಸದ್ರಿ ಫಾರ್ಮ ಹೌಸ ಅಂದಾಜು ಮೂರುವರೆಯಿಂದ ನಾಲ್ಕು ವರ್ಷದ ಹಿಂದಿನಿಂದ ಕಟ್ಟುತ್ತಿದ್ದೇವೆ . ಸದ್ರಿ ಮನೆಯನ್ನು ನೀವು ಜಮೀನಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾಗಿನಿಂದ ಮನೆಯನ್ನು ಕಟ್ಟಲು ಪ್ರಾರಂಭಿಸಲಾಗಿರುತ್ತದೆ ಎಂದರೆ ಸರಿ . ಸದ್ರಿ ಫಾರ್ಮ ಹೌಸ ಗೆ ಸಂಬಂಧಿಸಿದಂತೆ ನಾನು , ನನ್ನ ಅಕ್ಕ , ನನ್ನ ತಾಯಿ  ಪಾಲು ಮಾಡಿಕೊಂಡಿಲ್ಲ . ಸದ್ರಿ ಫಾರ್ಮ ಹೌಸ ದಾವಾ ಜಮೀನಿಗೆ  ತಾಗಿಕೊಂಡಿರುತ್ತದೆ . ಆದರೆ ಜಮೀನಿನ ಹೊರಗಡೆ ಇರುತ್ತದೆ. ಹಳೆಯ ಮನೆಯಿಂದ ಅಂದಾಜು 40 ಅಡಿ ದೂರದಲ್ಲಿರುತ್ತದೆ . ಹಳೆಯ ಮನೆ ಮತ್ತು ಫಾರ್ಹೌಸ ನ ಉಸ್ತುವಾರಿಯನ್ನು ಈಗ ಯಾರು ನೋಡಿ ಕೊಳ್ಳುತ್ತಾರೆ ಎಂದರೆ ಹಳೆಯ ಮನೆಯನ್ನು ಚಾವಿ ಹಾಕಿಟ್ಟಿದ್ದು ಬಳಸುತ್ತಿಲ್ಲ ಫಾರ್ಮ ಹೌಸ ನಾನೆ ನೋಡಿ ಕೊಳ್ಳುತ್ತಿದ್ದೇನೆ . ಹಳೆಯ ಮನೆಗೆ ಸಂಬಂಧಿಸಿಂದಂತೆ ಟಾಕ್ಸ ನಾನೆ ಕಟ್ಟುತ್ತಿದ್ದೇನೆ .   ಹಳೆಯ ಮನೆಯ ಚಾವಿ ಹಾಕಿಟ್ಟಿದ್ದು ಅದು ನನ್ನ ತಾಬಾ ಇರುತ್ತದೆ. ಅದರ ಮೇಲೆ ಪಂಚಾಯತಿಯಲ್ಲಿ ನನ್ನ ತಾಯಿ ಮತ್ತು ಅಕ್ಕ ಕಂಪ್ಲೆಂಟ್ ಮಾಡಿರುತ್ತಾರೆ. ನಿಮ್ಮ ತಾಯಿಗೆ ಹೊಸ ಮನೆ ಪ್ರವೇಶ ಕೊಟ್ಟಿದ್ದೀರಿ , ಕೊಡುತ್ತಿದ್ದೀರಿ  ಇನ್ನೂ ಮುಂದೆಯು ಕೊಡುತ್ತೀರಿ ಎಂದರೆ ಅವರು ಫಾರ್ಮ ಹೌಸಗೆ ಬಂದು ಹೋಗಿ ಮಾಡುತ್ತಾರೆ .  ಫಾರ್ಮ ಹೌಸ ಗೆ ನಿಮ್ಮ ವೈಯಕ್ತಿಕ ಹಣವನ್ನು  ನೀವು ವಿನಿಯೋಗ ಮಾಡಿದ್ದರ ಬಗ್ಗೆ ಪ್ರತ್ಯೇಕವಾದ ಲೆಕ್ಕ ವನ್ನು ಬರೆದಿಟ್ಟಿರುತ್ತೀರಾ ಎಂದರೆ ಹೌದು . ಫಾರ್ಮ ಹೌಸ್ ಕಟ್ಟಿರುವುದು ನನ್ನ ಸ್ವಂತ ಹಣದಲ್ಲಿ .

3. ನನ್ನ ವೈಯಕ್ತಿಕ ಆದಾಯ ವರ್ಷಕ್ಕೆ 15 ರಿಂದ 20 ಲಕ್ಷ ಇರುತ್ತದೆ . ಒಟ್ಟು ಕುಟುಂಬದಿಂದ ಬರುವ ವಾರ್ಷಿಕ ಆದಾಯವು 5 ರಿಂದ 6 ಲಕ್ಷವಾಗಿರುತ್ತದೆ .ಈ 5–6 ಲಕ್ಷ  ವಾರ್ಷಿಕ ಆದಾಯ ಹಾಗೂ ನಿಮ್ಮ ವೈಯಕ್ತಿಕ ಆದಾಯವನ್ನು ಒಂದೆ ಖಾತೆಯಲ್ಲಿ ಇಡುತ್ತೀರಾ ಎಂದರೆ ಹೌದು . ಆದರೆ ಲೆಕ್ಕ ಮಾತ್ರ ಬೇರೆ ಬೇರೆ ಬರೆಯಲಾಗಿರುತ್ತದೆ . 15 ರಿಂದ 20 ಲಕ್ಷ ಆದಾಯಕ್ಕೆ  ನೀವು ಆದಾಯ ತೆರಿಗೆ ಪಾವತಿ ಕಟ್ಟುತ್ತಿದ್ದೀರಾ ಎಂದರೆ ಈ ವರ್ಷದಿಂದ income tax ಫೈಲುವಾಗಿರುತ್ತದೆ. ನನಗೆ ಪ್ರತ್ಯೇಕವಾಗಿ ಪಾನ್ ಕಾರ್ಡ ಇರುತ್ತದೆ . 15 ಲಕ್ಷ ಇನಕಮ್ ನಲ್ಲಿ ಎಷ್ಟು ಕೃಷಿ ಆದಾಯ ಎಂದು ತೋರಿಸಿರುತ್ತೀರಾ ಎಂದರೆ ಹೌದು. ಸದ್ರಿ ಇನಕಮ ಟ್ಯಾಕ್ಸ ದಾಖಲಾತಿ ಪತ್ರದಲ್ಲಿ ನಿಮ್ಮ ವೈಯಕ್ತಿಕ ಆದಾಯ ಎಷ್ಟು ಒಟ್ಟು ಕುಟುಂಬದ ಆದಾಯ ಎಷ್ಟು

ನಮೂದುವಾಗಿರುತ್ತದೆ ಎಂದರೆ ದಾಖಲಾತಿ ಇರುತ್ತದೆ . ತೆರಿಗೆ ದಾಖಲಾತಿ ನಮ್ಮ ವಕೀಲರ ಬಳಿ ಇರುತ್ತದೆ . ನಾನು ಮೊಬೈಲ ಅಂಗಡಿಯನ್ನು ಇಟ್ಟು ಕೊಂಡು 19 ವರ್ಷವಾಯಿತು. ಮೊಬೈಲ ಅಂಗಡಿಯನ್ನು ಇಟ್ಟು ಕೊಂಡು ಇಂತಹ ಸಾಮಾನುಗಳನ್ನು ಖರಿದಿ ಮಾಡಲು ಹಣ ಬೇಕಾಗುತ್ತದೆ ಎಂದು ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿರುತ್ತೀರಾ ಎಂದರೆ ಹೌದು . ಅದನ್ನು ಕೂಡ ನ್ಯಾಯಾಲಯಕ್ಕೆ ಇದುವರೆಗೂ ಹಾಜರು ಪಡಿಸಿಲ್ಲ ಎಂದರೆಸರಿ . ನಾನು ಮೊಬೈಲ ಅಂಗಡಿ ನಡೆಸುತ್ತಿರುವುದು ಸುಳ್ಳು . ನಾನು ಒಟ್ಟು ಕುಟುಂಬದ ಆಸ್ತಿಯಿಂದ ಬಂದ ಆದಾಯದಿಂದಲೇ ಎಲ್ಲಾ ವ್ಯವಹಾರ ನಡೆಸುತ್ತಿದೇನೆ ಎಂದರೆ ಸರಿಯಲ್ಲ . ಪಾರ್ಮ ಹೌಸ ಮಾಡಲು ಮತ್ತು ನಿಮ್ಮ ವ್ಯವಹಾರದ ಎಲ್ಲಾ ನಿರ್ವಹಣೆ ಯನ್ನು ಒಟ್ಟು ಕುಟುಂಬದ ಆದಾಯದಿಂದ ನೀವು ಮಾಡುತ್ತಿರುವುದು ಎಂದರೆ ಸುಳ್ಳು .ನೀವು ಪ್ರಾಯಪ್ರಬುದ್ಧ ನಾದ ದಿನದಿಂದ ಒಟ್ಟು ಕುಟುಂಬದ ಆಸ್ತಿಯ ನಿರ್ವಹಣೆಯನ್ನು ನಿವೇ ಮಾಡುತ್ತಿರುವುದು ನಿಮ್ಮ ತಾಯಿ ಯಲ್ಲ ಎಂದರೆ ಸುಳ್ಳು .ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಇವತ್ತಿನ ವರೆಗೂ ನ್ಯಾಯಾಲಯದಿಂದ ವಾಂಟಣಿ ಪತ್ರವಾಗಲಿ ಅಥವಾ ನೋದಾಯಿತ ವಾಂಟಣಿ ಪತ್ರವಾಗಲಿ ಆಗಿದ್ದು ಇಲ್ಲ ಎಂದರೆ ಸರಿ . ದಾವಾಸ್ತಿಯಲ್ಲಿ ಮೂರು ಪಾಲು ಆಗಲು ನನ್ನ ತಕರಾರು ಇರುವುದಿಲ್ಲ . ನಿಮ್ಮ ತಂದೆಯ ಕಾಲದಿಂದಲೂ ಮಾಲ್ಕಿ ಜಾಗದ ಪಕ್ಕದಲ್ಲಿರುವ ಸರಕಾರಿ ಜಮೀನನನ್ನು ಒತ್ತುವರಿ ಮಾಡಿದ್ದು ಇರುತ್ತದೆ ಎಂದರೆ ಆ ಒತ್ತುವರಿ ಯನ್ನು ನನ್ನ ತಂದೆ ಮಾಡಿದ್ದು ಅಲ್ಲ ನಾನು ಮಾಡಿದ್ದು . ನನ್ನ ಅಜ್ಜನ ಕುಟುಂಬದಿಂದ ಬೇರೆ ಯಾದ ನಂತರ ಸರಕಾರಿ ಜಮೀನನನ್ನು ನಾನೇ ಒತ್ತುವರಿ ಮಾಡಿರುತ್ತೇನೆ.

4. ವಾದಿಯ ಮದುವೆಯನ್ನು 2001 ರಲ್ಲಿ ಮಾಡಲಾಗಿರುತ್ತದೆ . ನನ್ನ ಸಹೋದರಿಯ ಮನೆಯನ್ನು ನನ್ನ ತಾಯಿ ಮಾಡಿದ್ದು ,ಅವರ ಜೊತೆಗೆ ನಾನು ಇದ್ದೆ . ಮದುವೆಗೆ ಬೇದಾದ ಸಾಮಾನುಗಳನ್ನು ನನ್ನ ತಾಯಿ ಖರೀದಿ ಮಾಡಿರುತ್ತಾರೆ . ನಿಮ್ಮ ತಂದೆ ತೀರಿ ಹೋದ ನಂತರ ನಿಮ್ಮ ತಾಯಿ ಬೇರೆ ಉತ್ಪನ್ನ ಇರುತ್ತದೆಯಾ ಎಂದರೆ insurance ಹಣ ಬಂದಿದ್ದು ಮತ್ತು ಜಮೀನಿನ ಉತ್ಪನ್ನದ ಹಣ ಬಂದಿತ್ತು . insurance ದಿಂದ ಬಂದ ಹಣದಲ್ಲಿ ನಿಮಗೆ ಪ್ರತ್ಯೇಕವಾದ ಶೇರು ಇತ್ತೊ ಇಲ್ಲವೊ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . 18 ವರ್ಷ ವಾದ ಬಳಿಕ ಒಂದುಸಹಿ ಹಾಕು ಕೊಡು ಎಂದು ಹೇಳಿದರು ಅದಕ್ಕೆ ನಾನು ಸಹಿ ಹಾಕಿ ಕೊಟ್ಟೆನು .

ಸ್ತ್ರಿ  ಅಪಘಾತದಿಂದ ಬಂದ ಪರಿಹಾರದ ಹಣವನ್ನು ನಿಮ್ಮ ತಾಯಿ ಯೇ ವಿನಿಯೋಗಿಸಿಕೊಂಡಿರುತ್ತಾಳೆ ಎಂದರೆ  ಅವರೆ ಬಳಸಿಕೊಂಡಿರುತ್ತಾರೆ .

5. ವಾದಿಯ ಮದುವೆಯ ಕಾಲಕ್ಕೆ ನನ್ನ ತಾಯಿ ಸಾಲ ಮಾಡಿದ್ದರು . ಆ ಸಾಲವನ್ನು ನಾನು ತೀರಿಸಿಲ್ಲ . ನನ್ನ ತಾಯಿಯೇ ತೀರಿಸಿರುತ್ತಾರೆ .

6. ಹಳೆಯ ಮನೆಗೆ ಬೀಗ ಹಾಕಿ 3 ರಿಂದ ಮೂರುವರೆ ವರ್ಷವಾಯಿತು . ಹೊಸ ಮನೆಯಲ್ಲಿ ನನ್ನ ತಾಯಿ ಉಳಿದು ಕೊಳ್ಳಲು ಪ್ರತೇಕವಾದ ಕೋಣೆ ಮಾಡಲಾಗಿದೆ . ಅದನ್ನು ಅವರಿಗೆ ಬಿಟ್ಟು ಕೊಡಲು  ಮತ್ತು ವಾಸ್ತವ್ಯಕ್ಕೆ ಕೊಡಲು ಯಾವುದೇ ತೊಂದರೆ  ಇರುವುದಿಲ್ಲ ಎಂದರೆ  ಮೊದಲು ಇರಲಿಲ್ಲ ಈಗ ತೊಂದರೆ ಇರುತ್ತದೆ .ಒಂದುವರೆ –ಎರಡು ವರ್ಷಗಳಿಂದ ತೊಂದರೆ ಅಂದರೆ ಅವರೆ ನನಗೆ ತೊಂದರೆ ಕೊಡುತ್ತಿದ್ದಾರೆ . ಅವರು ತೊಂದರೆ ಕೊಡಲು ಅವರಿಗೆ ಆ ಫಾರ್ಮ ಹೌಸ ದಲ್ಲಿ ಹಕ್ಕು ಇರುತ್ತದೆಯೊ ಇಲ್ಲವೊ ಎಂದರೆ ಮನೆಯಲ್ಲಿ ಹಕು ಇಲ್ಲ ಆದರೆ ನಾನು ಮಗನಾದ ಕಾರಣ ಅವರಿಗೆ ಆ ಮನೆಯಲ್ಲಿ ಇರಲು ಹಕ್ಕು ಇರುತ್ತದೆ . ಅವರಿಗೆ  ಜೀವನ ಮಾಡಿಕೊಳ್ಳಲು ಅಡಿಕೆ , ತೆಂಗು , ಬಾಳೆ ಕೊಟ್ಟಿದ್ದು ಇಲ್ಲ . ಆದರೆ ಹಣ ಕೊಟ್ಟಿದ್ದು ಇರುತ್ತದೆ .  ಎಷ್ಟು ವರ್ಷದಿಂದ ಹಣ ಕೊಡುತ್ತಿದ್ದೀರಿ ಎಂದರೆ 2 ವರ್ಆಷದಿಂದ ಅವರು  ಯಲ್ಲಾಪುರ ಪೋಲಿಸ್ ಕಂಪ್ಲೆಂಟ  ಮಾಡಿದ್ದು ಅಲ್ಲಿ ಪೋಲಿಸರ ಸಮಕ್ಷಮದಲ್ಲಿ ನನ್ನ ತಾಯಿಗೆ ಹಣ ಕೊಡುತ್ತೇನೆ  ಎಂದು ಬರೆದು ಕೊಟ್ಟಿದ್ದೆ ಅದೇ ರೀತಿ ಯಾಗಿ ಹಣ ಕೊಟ್ಟಿರುತ್ತೇನೆ . ಆಕಾರಣಕ್ಕೆ ನಾನು ರೂ 50 ಸಾವಿರ ಹಣವನ್ನು ನನ್ನ ತಾಯಿಗೆ ಕೊಟಿಟದ್ದೇನೆ ಅದರ ನಂತರ ನಾನು ಹಣ ಕೊಟ್ಟಿಲ್ಲ . ಅಜಮಾಸು 2 ವರ್ಷದ ಹಿಂದೆ ರೂ 50 ಸಾವಿರ ಹಣವನ್ನು ಪೋಲಿಸ ಠ–ಣೆಯಲ್ಲಿ ಕೊಟ್ಟಿದ್ದೇನೆ .

7. ಯಲ್ಲಾಪುರ ದಲ್ಲಿ ಒಟ್ಟು ಕುಟುಂಬದ ಹೆಸರಿನಲ್ಲಿ ಮನೆ ಇರುತ್ತದೆ . ಅದು ನನ್ನ ತಾಯಿಯ ಹಸೆರಿನಲ್ಲಿರುತ್ತದೆ .  ಕೊಡ್ಲಗದ್ದೆಯಲ್ಲಿರುವ  ಮನೆಗೆ ಚಾವಿ ಹಾಕಿದ್ದು ಮತ್ತು ಹೊಸ ಮನೆಗೆ ತಾಯಿಗೆ ಹೋಗಲು ಅವಕಾಶ ಮಾಡಿಕೊಡದೇ ಇರುವ ಕಾರಣ ಅವರು ಅವರ ಸ್ತ್ರಿ ಧನದಿಂದ ಬಂದಿರುವ ಆಸ್ತಿಯಲ್ಲಿರುವ ಮನೆಗೆ ಅವರು ಹೋಗಿರುತ್ತಾರೆ ಎಂದರೆ  ಅಕ್ಕ ನನ್ನ ತಾಯಿಯನ್ನು ಯಲ್ಲಾಪುರ ಮನೆಗೆ ಕರೆದುಕೊಂಡು ಹೋದ ನಂತರ ನಾನು ಕೊಡ್ಲಗದ್ದೆ ಯಲ್ಲಿರುವ ಮನೆಗ ಚಾವಿ ಹಾಕಿರುತ್ತೇನೆ . ಅದರ

ನಂತರ ನಾನು ಹೊಸ ಮನೆಯಲ್ಲಿ ಅಂದರೆ ಫಾರ್ಮ ಹೌಸ ದಲ್ಲಿ ಉಳಿಯಲು ಪಾರರಂಭಸಿದೆನು . ಸದ್ರಿ ಪಾರ್ಮ ಹೌಸ ನ ಅಳತೆ 30 X30 ಇರುತ್ತದೆ . ಅದು 2 ಮಾಳಿಗೆಯ ಮನೆ . ಆದು ಆರ್ ಸಿ ಸಿ ಮನೆ . ಯಲ್ಲಾಪುರ ದಲಿಲರುವ ಜಮೀನು ನಮ್ಮ 3 ಜನ ಹೆಸರಿನಲಿಲರುವುದಿಲ್ಲ. ಅದು ಕುಟುಂಬದ ಅಜ್ಜನ ಮೂಲ ಆಸ್ತಿ ಇತ್ತು . ನನ್ನ ಅಜ್ಜನ ಮೂಲ ಆಸ್ತಿಯಲ್ಲಿ ಯಲ್ಲಾಪುರದಲಿಲ ನನ್ನ ತಾಯಿ ಮನೆಕಟ್ಟಿಕೊಂಡಿರುವುದಿಲ್ಲ . ಸಾಕ್ಷಿಯು ಪುನಃ ಮುಂದುರೆದು ನನ್ನ ತಾಯಿಯು ನನ್ನ ತಂದೆಯ ಅಪಘಾತದಿಂದ ಬಂದ ಪರಿಹಾರದ ಹಣದಿಂದ ಜಾಗ ತೆಗೆದುಕೊಂಡು ಮನೆ ಕಟ್ಟಿರುತ್ತಾರೆ . ನಿಮ್ಮ ತಂದೆ ತೀರಿ ಕೊಡಂ ನಂತರ ನಿಮ್ಮ ತಾಯಿಗೆ ನಿಮ್ಮ ಅಕ್ಕನಿಗೆ ಮತ್ತು ನಿಮಗೆ ವೈಯಕ್ತಿಕವಾಗಿ ಪರಿಹಾರದ ಹಣ ಬಂದಿತ್ತು ಎಂರದೆ ನನಗೆ ಗೊತ್ತಿಲ್ಲ . ಯಲ್ಲಾಪುರ ದಲ್ಲಿ ಮನೆ ಕಟ್ಟಲು ನಾನು ಧನ ಸಹಾಯ ಮಾಡಿಲ್ಲ . ದಾವಾಸ್ತಿಯಲ್ಲಿರುವ ಮನೆಗೆ ತಾಯಿಯನ್ನು ಹೋಗಲು ಬಿಡದೆ ಅಲ್ಲಿಂದ ಬಂದ ಉತ್ಪನ್ನವನ್ನು ತಾಯಿಗೆ ಕೊಡದೆ ನಿವೇ ಅನಗತ್ಯವಾಗಿ ಪ್ರಕರಣವನ್ನು ಮುಂದುಡುತ್ತೀರಿ ಎಂದರೆ ಸರಿಯಲ್ಲ . ನೀವು ಅನಗತ್ಯವಾಗಿ ಮಧ್ಯಂತರ ಅರ್ಜಿ ಸಲಿಲಸಿ ಈ ದಾವೆಯನ್ನು ಮುಂದೂಡಿಕೊಳ್ಳುತ್ತಾ ಬರುತ್ತಾ ಇದ್ದೀರಿ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ನೀವು ಹಾಜರುಪಡಿಸಿದ ದಾಖಾಲತಿಗಳು ದಾವಾಸ್ತಿಗೆ ಸಬಂಧಿಸಿದ್ದು ಅಲ್ಲ ಎಂದರೆ ಫಾರ್ಮ ಹೌಸ ಗೆ ಸಂಬಂಧಿಸಿದ್ದು ಅದು ಜಮೀನಿಗೆ ಸಂಭಂಧಿಸಿದ್ದು ಅಲ್ಲ . ಸಾಕ್ಷಿಯು ಪುನಃ ದಾಖಲಾತಿ ಕೊಟ್ಟಿರುತ್ತೇನೆ ಯಾವ ರೀತಿಯಾಗಿ ಜೋಡಣೆ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ . ದಾವಾ ಜಮೀನು ಪಾರ್ಮ ಹೌಸ ಹಾಗೂ ಮನೆಯಲ್ಲಿ ತಾಯಿ 1/3 ದಷ್ಟು ಸಮ ಪಾಲು ಇರುತ್ತದೆ ಎಂದರೆ ಸರಿಯಲ್ಲ . ಫಾರ್ವ ಹೌಸ ಆರ್ ಸಿ ಸಿ ಹಾಗೂ ಹಳೆಯ ಮನೆ 251 ರಲ್ಲಿ ತಾಯಿಗೂ ಕೂಡ 1/3 ದಷ್ಟು ಪಾಲು ಇರುತ್ತದೆ ಎಂದರೆ ಸರಿಯಲ್ಲ .ನೀವು 6 ತಿಂಗಳು ಮಗು ಇದ್ದಾಗಲೆ ನಿಮ್ಮ ತಂದೆಯನಲ್ನು ಕಳೆದುಕೊಂಡದ್ದಾಗಿನಿಂದಲೂ ನಿಮ್ಮ ಹಕ್ಕಿಗೆ ಯಾವುದೇ ಚ್ಯೂತಿ ಬರದಂತೆ ನಿಮ್ಮ ತಾಯಿ ಯು ನಿಮ್ಮ ನ್ನು ಸಾಕಿ ಸಲಹಿ ಬೆಳೆಸಿದರೂ ಸಹ ಈಗ ಅವರಿಗೆ ವಿನಾಕಾರಣ ಅವರ ಇಳಿ ಪ್ರಾಯದ ವಯಸ್ಸಿನಲ್ಲಿ ಹಿಂಸೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ .

8.  ನಮ್ಮ ತಂದೆಯ ಕಾಲದಿಂದಲೂ ಬಂಗಾರದ ಆಭರಣಗಳು ನನ್ನ ತಾಯಿಯ ಸುಪರ್ದಿಯಲ್ಲಿದೆ . ಅಕ್ಕನ ಮದುವೆ ಮಾಡುವ ಕಾಲಕ್ಕೂ ಸದ್ರಿ ಬಂಗಾರದ ಒಡವೆಗಳು ಇದ್ದವು . ನೀವು ಬಂಗಾರದ ಒಡವೆಗಳನ್ನು ಖರೀದಿ ಮಾಡಿದ್ದು ಎಂದು ಸುಳ್ಳು ಪಾವತಿಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದೀರಿ  ಎಂದರೆ ಸರಿಯಲ್ಲ . ನಿಮಗೆ ವೈಯಕ್ತಿಕವಾಗಿ ಯಾವುದೇ ಉತ್ಪನ್ನ ಇಲ್ಲ . ನಿಮ್ಮ ವೈಯಕ್ತಿಕ ಉತ್ಪನ್ನವನ್ನು  ಒಟ್ಟು ಕುಟುಬಕ್ಕಾಗಿ ವ್ಯಯ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ** ..

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.